ಆಣಿಮುತ್ತುಗಳನ್ನು ನಾವು ಅನುಭವಿಸುತ್ತಿದ್ದೇವೆ. ನಾವು ಕೃತಜ್ಞರಾಗಿರಬೇಕು ಅವರಿಗೆ...

'ಇದೊಂದು ಕ್ಲಬ್ ಕಲ್ಚರ್. ಒಬ್ಬರನ್ನು ಇನ್ನೊಬ್ಬರು ಓಲೈಸುತ್ತ ಇರುತ್ತಾರೆ. ಅದಲ್ಲದಿದ್ದರೆ ಕ್ಲಬ್‌ನಿಂದ ಹೊರಗೆ. ಇಂಥ ಕ್ಲಬ್‌ಗಳು ಅನೇಕ ಇವೆ. ನಾವಿಲ್ಲಿ ಏನನ್ನುತ್ತೇವೆ? ಪ್ರಶ್ನಿಸಿರಿ ಎನ್ನುತ್ತೇವೆ. ಆದರೆ, ಪ್ರಶ್ನಿಸಿದವ ಢಷ್ಟ!

'ಹೇಳುವುದಕ್ಕೆ ಇನ್ನಷ್ಟು ಇವೆ: ಆದರೆ, ಕೆಲವು ಸಂಗತಿಗಳನ್ನು ನಾವಾಗಿಯೇ ಕಂಡುಕೊಳ್ಳುವುದು ಉತ್ತಮ. ಆಗ ಅವು ಫ್ರೆಶ್ಶಾಗಿ ನಮ್ಮ ಅನುಭವಕ್ಕೆ ಬರುತ್ತವೆ, ಗಾಢವಾಗಿ ಉಳಿಯುತ್ತವೆ. ಹೊಸ ಮಳೆಗೆ ಮೊಳಕೆಯೊಡೆಯುವ ಬೀಜಗಳ ಹಾಗೆ. ನನಗೆ ಈ ಗಗ್ಗರದ ಅನುಭವ ಅಂಥದ್ದು...'

ಹೀಗೆಂದು ನಾನು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಆವತ್ತು ಅಂದಿದ್ದರೂ ನನ್ನ ಮಾತಿನಿಂದ ನಾನೇ ಕನ್ವಿನ್ಸ್ ಆಗಿದ್ದೆನೇ? ಈ ಗಗ್ಗರಗಳು ನಿಜಕ್ಕೂ ನನಗೆ ಕಿರಿಕಿರಿಯಾಗಿದ್ದವು. ಅವನ್ನು ಯಾರೂ ಕಳಚದಂತೆ ನನ್ನ ಕಾಲುಗಳಿಗೆ ಫಿಕ್ಸ್ ಮಾಡಲಾಗಿತ್ತು. ಯಾವ ಲೋಹದ್ದೋ ತಿಳಿಯದು, ಸಾಕಷ್ಟು ಭಾರವಾಗಿಯೂ ಇದ್ದವು. ಇವುಗಳ ಜಾಯಿಂಟ್ ಎಲ್ಲಿ ಎಂದು ಎಷ್ಟು ಹುಡುಕಿದರೂ ನನಗೆ ಕಾಣಿಸುತ್ತಿರಲಿಲ್ಲ. ಬಹುಶಃ ಇವಕ್ಕೆ ಜಾಯಿಂಟೇ ಇಲ್ಲ. ಆರಂಭದಲ್ಲಿ ನನ್ನನ್ನು ಕಂಡವರೆಲ್ಲ ಮುಖ ನೋಡದೆ ಕಾಲುಗಳನ್ನೇ ನೋಡುತ್ತಿದ್ದರು. ಇದೇನು ಹೀಗೆ ಎಂದು ಕೆಲವರು ವಿಚಾರಿಸುತ್ತಿದ್ದರು ಕೂಡ. ಅವರಿಗೆ ಸತ್ಯವನ್ನೇ ಹೇಳುತ್ತಿದ್ದೆ: ನನ್ನ ವೇಗ ನಿಯಂತ್ರಿಸುವುದಕ್ಕಿರುವ ಸಾಧನಗಳಿವು ಎಂದರೂ ಜನ ನಂಬುತ್ತಿರಲಿಲ್ಲ. ಇದು ಸುಳ್ಳೆಂದೇ ತಿಳಿಯುತ್ತಿದ್ದರು. ಸತ್ಯಕ್ಕಿಂತ ನಿಜವಾದ ಸತ್ಯವನ್ನು ನಾನೆಲ್ಲಿಂದ ತರಲಿ? ವಾಸ್ತವವೆಂದರೆ ಕಾಲಕ್ರಮೇಣ ನನಗೂ ಟ್ರೈಬ್ಯೂನಲ್ ಮೇಲೆ ವಿಶ್ವಾಸ ಕರಗತೊಡಗಿತು. ಇದೆಲ್ಲದರ ಹಿಂದೆ ದೊಡ್ಡದೊಂದು ಮಸಲತ್ತು ಇದೆ ಎಂದೆನಿಸಿತು. ನಾನು ಮತ್ತೆ ಯಾನ ಮಾಡಬೇಕು, ಮತ್ತೆ ಟ್ರೈಬ್ಯೂನಲ್ ಮುಂದೆ ಹಾಜರಾಗಿ ನನ್ನ ಕೇಸು ವಾದಿಸತಕ್ಕದ್ದು. ಅವರು ಹೇಳಿದುದನ್ನು ನಾನು ಕೇಳಿ ಸುಮ್ಮನಿರುವುದಕ್ಕಿಂತ ನಾನು ಹೇಳುವುದನ್ನು ಅವರು ಕೇಳುವಂತೆ ಮಾಡಬೇಕು. ಯಾರಿಗೆ ಗೊತ್ತು, ಟ್ರೈಬ್ಯೂನಲ್ ಕೂಡಾ ಈಗ ಬದಲಾಗಿರಬಹುದು, ನಿಯಮಗಳು ಬದಲಾಗಿರಬಹುದು. ನಾನು ಇಲ್ಲೇ ಉಳಿದರೆ ನನಗೆ ಗೊತ್ತಾಗುವುದು ಹೇಗೆ? ಕರೆ ಬರುತ್ತದೆ ಎಂದು ಹೇಳಿದ್ದರು; ಆದರೆ, ಇದು ತನಕ ಬಂದಿಲ್ಲ ಎಂದಮೇಲೆ ಏನರ್ಥ? ನಾನಿದನ್ನು ಕೂಲಂಕಷ ತಿಳಿಯಲೇ ಬೇಕು. ಹೀಗನಿಸಿದ ನಂತರ ತಡಮಾಡದೆ ಒಂದು ದಿನ ನಾನು ನನ್ನ ಮಾರ್ಜಿನಲ್ ವಾಕ್‌ವೇ ಏರಿಯೇಬಿಟ್ಟೆ. ಈ ಸಲ ನಾನು ಯಾವ ತಪ್ಪೂ ಮಾಡಬಾರದು ಎಂದು ನಿಶ್ಚಯಿಸಿದೆ. ಧಾವಂತ ಬೇಡ, ಸಾವಧಾನ! ಆದರೆ, ಸಮಸ್ಯೆಯೆಂದರೆ ನನ್ನ ವಾಕ್‌ವೇಯ ಗತಿ ನನ್ನ ಗತಿಗೆ ವಿರುದ್ಧವಾಗಿದ್ದುದು; ಆದ್ದರಿಂದ ನಾನು ಮುಂದುವರಿಯಲು ಬಹಳಷ್ಟು ಶ್ರಮ ವಹಿಸಲೇಬೇಕಾಗಿತ್ತು. ಈಗ ನನ್ನಲ್ಲಿ ಹಿಂದಿನಷ್ಟು ಚೈತನ್ಯ ಇರಲಿಲ್ಲ—ವಯಸ್ಸಾಗಿತ್ತು ತಾನೆ? ಆದರೂ ಶ್ರಮ ಹಾಕದೆ ಮುಂದೆ ಹೋಗುವಂತೆಯೂ ಇರಲಿಲ್ಲ. ಈ ವಿಚಿತ್ರ ಸ್ಥಿತಿಯಲ್ಲಿ ನಾನು ಮುಂದುವರಿಯುತ್ತ ನನ್ನ ಅಕ್ಕಪಕ್ಕದಲ್ಲಿ ಹಿಂದಣ ಜನ ಯಾರಾದರೂ ಕಾಣಿಸುತ್ತಾರೋ ಎಂದು ನೋಡತೊಡಗಿದೆ; ಜನ ಇದ್ದರು, ಅದರೆ ಹಿಂದೆ ಕಾಣಿಸಿದವರು ಯಾರೂ ಅಲ್ಲ. ಮಾತ್ರವಲ್ಲ, ಅವರು ಯಾರಿಗೂ ನನ್ನ ಕುರಿತಾಗಿ ಯಾವ ಆಸಕ್ತಿಯೂ ಇದ್ದಂತೆ ತೋರಲಿಲ್ಲ. ಬಹುಶಃ ಇದು ಹೊಸ ತಲೆಮಾರು ಎಂದುಕೊಂಡೆ. ನನಗೂ ಯಾರೊಡನೆ ಮಾತಾಡುವ ಇಚ್ಛೆಯೂ ಇರಲಿಲ್ಲ. ಅಧ್ವಾನದಿಂದ ನನಗೆ ಬೆವರಿಳಿಯುತ್ತಿತ್ತು. ನಿಜ, ಒಂದು ಗ್ಲಾಸು ಕಬ್ಬಿನ ಹಾಲೋ ಶರಬತ್ತೋ ಸಿಕ್ಕಿದರೆ ಚೆನ್ನಾಗಿರುತ್ತಿತ್ತು; ಆದರೆ, ಅದಕ್ಕೆಲ್ಲ